# ನಾಗರಿಕರಿಗೆ ಬರಹಗಾರರ ಮನವಿ

ದ್ವೇಷ ರಾಜಕಾರಣದ ವಿರುದ್ಧ ಮತ ಚಲಾಯಿಸೋಣ, ಸಮಾನ ಹಾಗೂ ಬಹುತ್ವ ಭಾರತಕ್ಕಾಗಿ ಮತ ಚಲಾಯಿಸೋಣ.

ಬರುತ್ತಿರುವ ಚುನಾವಣೆಯು ನಮ್ಮ ದೇಶವನ್ನು ಬಿಕ್ಕಟ್ಟಿಗೆ ತಂದು ನಿಲ್ಲಿಸಿದೆ. ನಮ್ಮ ಸಂವಿಧಾನವು ಎಲ್ಲಾ ನಾಗರಿಕರಿಗೆ ಸಮಾನ ಹಕ್ಕುಗಳನ್ನು, ಅವರು ಬಯಸಿದ ಹಾಗೆ ಆಹಾರ ಸೇವಿಸುವ, ಪ್ರಾರ್ಥಿಸುವ, ಅವರ ಆಯ್ಕೆಯ ಹಾಗೆ ಬದುಕುವ, ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಭಿನ್ನಾಭಿಪ್ರಾಯದ ಹಕ್ಕನ್ನು ನೀಡಿದೆ. ಆದರೆ ಕಳೆದ ಕೆಲವು ವರ್ಷಗಳಿಂದ ಅವರ ಕೋಮು, ಜಾತಿ, ಲಿಂಗ ಅಥವಾ ಅವರ ಪ್ರದೇಶಗಳ ಕಾರಣಕ್ಕಾಗಿ ನಾಗರಿಕರನ್ನು ಸಾಮೂಹಿಕವಾಗಿ ಕೊಲ್ಲುವುದನ್ನು, ಅವರ ಮೇಲೆ ದಾಳಿ ಮಾಡುವುದನ್ನು ಮತ್ತು ತಾರತಮ್ಯ ಮಾಡುವುದನ್ನು ನಾವು ನೋಡಿದ್ದೇವೆ. ದ್ವೇಷ ರಾಜಕಾರಣವನ್ನು ನಮ್ಮ ದೇಶವನ್ನು ಒಡೆಯಲು, ಭೀತಿ ಹುಟ್ಟಿಸಲು ಮತ್ತು ಹೆಚ್ಚೆಚ್ಚು ಜನರು ಪೂರ್ಣ ಪ್ರಮಾಣ ನಾಗರಿಕರಂತೆ ಬದುಕುವುದರಿಂದ ಹೊರಗಿಡಲು ಬಳಸಲಾಗುತ್ತಿದೆ. ಬರಹಗಾರರು, ಕಲಾವಿದರು, ಚಲನಚಿತ್ರ ನಿರ್ಮಾಪಕರು, ನಿರ್ದೇಶಕರು, ಸಂಗೀತಕಾರರು ಮತ್ತು ಸಾಂಸ್ಕೃತಿಕ ಕ್ರಿಯಾಶೀಲರಿಗೆ ಕಿರುಕುಳ ಕೊಟ್ಟು, ಬೆದರಿಸಿ ಸೆನ್ಸರ್ ಮಾಡಲಾಗಿದೆ. ಅಧಿಕಾರದಲ್ಲಿರುವ ಶಕ್ತಿಗಳನ್ನು ಪ್ರಶ್ನಿಸುವವರು ಹಿಂಸೆಗೆ ಒಳಗಾಗುವ, ಸುಳ್ಳು ಹಾಗೂ ಹಾಸ್ಯಾಸ್ಪದ ಆರೋಪಗಳ ಮೇಲೆ ಬಂಧನಕ್ಕೊಳಗಾಗುವ ಅಪಾಯದಲ್ಲಿದ್ದಾರೆ.

ನಾವೆಲ್ಲರೂ ಇದು ಬದಲಾಗಬೇಕೆಂದು ಬಯಸುತ್ತೇವೆ. ವಿಚಾರವಾದಿಗಳು, ಬರಹಗಾರರು ಮತ್ತು ಕಾರ್ಯಕರ್ತರು ಕಿರುಕುಳಕ್ಕೆ ಈಡಾಗುವುದು ಅಥವಾ ಕೊಲೆಗೀಡಾಗುವುದನ್ನು ನಾವು ಬಯಸುವುದಿಲ್ಲ. ಮಹಿಳೆಯರು, ದಲಿತರು, ಆದಿವಾಸಿಗಳು ಮತ್ತು ಅಲ್ಪಸಂಖ್ಯಾತರ ಮೇಲೆ ಮಾತಿನ ಮೂಲಕ ಅಥವಾ ಕ್ರಿಯೆಗಳ ಮೂಲಕ ನಡೆಯುವ ಹಿಂಸೆಯ ವಿರುದ್ಧ ಅತ್ಯಂತ ಕಠಿಣವಾದ ಕ್ರಮಗಳನ್ನು ಬಯಸುತ್ತೇವೆ. ಉದ್ಯೋಗಗಳು, ಶಿಕ್ಷಣ, ಸಂಶೋಧನೆ, ಆರೋಗ್ಯ ಮತ್ತು ಎಲ್ಲರಿಗೂ ಸಮಾನ ಅವಕಾಶಗಳು ದೊರೆಯುವಂತಾಗಲು ಬೇಕಾದ ಸಂಪನ್ಮೂಲಗಳನ್ನು ಹಾಗೂ ಕ್ರಮಗಳನ್ನು ಬಯಸುತ್ತೇವೆ. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಬಹುತ್ವವನ್ನು ರಕ್ಷಿಸಲು ಹಾಗೂ ಪ್ರಜಾಪ್ರಭುತ್ವವು ಸದೃಢವಾಗಿ ಬೆಳೆಯಲೆಂದು ಬಯಸುತ್ತೇವೆ.

ಇದನ್ನು ಹೇಗೆ ಮಾಡುವುದು? ನಮಗೆ ತುರ್ತಾಗಿ ಅವಶ್ಯವಾಗಿರುವ ಬದಲಾವಣೆಯನ್ನು ಹೇಗೆ ತರುವುದು? ನಾವು ಮಾಡಬೇಕಾದ ಹಾಗೂ ಮಾಡಬಹುದಾದ ಅನೇಕ ಸಂಗತಿಗಳಿವೆ. ಆದರೆ ಅತಿಮಹತ್ವದ ಒಂದು ಮೊದಲ ಹೆಜ್ಜೆ ಇದೆ.

ನಾವು ಇಡಬೇಕಾದ ಮೊದಲ ಹೆಜ್ಜೆಯೆಂದರೆ ದ್ವೇಷ ರಾಜಕಾರಣವನ್ನು ಚುನಾವಣೆಯಲ್ಲಿ ಸೋಲಿಸಬೇಕಿದೆ. ನಮ್ಮ ಜನರ ವಿಭಜನೆಯನ್ನು ಸೋಲಿಸಬೇಕಿದೆ; ಅಸಮಾನತೆಯನ್ನು ಸೋಲಿಸಬೇಕಿದೆ; ಹಿಂಸೆಯ ವಿರುದ್ಧ ಮತ ಚಲಾಯಿಸಬೇಕಾಗಿದೆ. ಸೆನ್ಸರ್‌ಶಿಪ್ ವಿರುದ್ಧ ಮತ ಚಲಾಯಿಸಬೇಕಿದೆ. ನಮ್ಮ ಸಂವಿಧಾನವು ನಮಗೆ ನೀಡಿದ ಆಶ್ವಾಸನೆಗಳನ್ನು ಮತ್ತೆ ನವೀಕರಿಸುವ ಭಾರತಕ್ಕಾಗಿ ನಾವು ಮತ ಚಲಾಯಿಸುವುದು– ಇದೊಂದೇ ದಾರಿ ನಮಗಿದೆ. ಆದ್ದರಿಂದಲೇ ನಾವು ಬಹುತ್ವ ಹಾಗೂ ಸಮಾನತೆಯ ಭಾರತಕ್ಕಾಗಿ ಮತ ಚಲಾಯಿಸಿರಿ ಎಂದು ಎಲ್ಲಾ ನಾಗರಿಕರನ್ನು ಕೋರುತ್ತಿದ್ದೇವೆ.